Regd No B 155 22-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಇಂದು, ನಾಳೆ ನಡೆಯುವ ಏಐಸಿಸಿ ಅಧಿವೇಶನಕ್ಕೆ ಪ್ರತಿಬಂಧಕ ಇಲ್ಲ

ಮೈಸೂರ್ ಬಂದ್

ಪ್ರಧಾನಿ ಇಂದಿರಾರವರಿಗೆ ಬಿಂಬಲ ನೀಡಲು ಇಂದು ಮೈಸೂರ್ ಬಂದ್ ಅಪೂರ್ಣ ಆಗಿತ್ತು – ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಲಿದೆ.

ನೆಕ್ಸಲೈಟರ ಹಾವಳಿ

ಮಾಂಘೀರ್— ಉತ್ತರ ಮಾಂಘೀರ್ ಸಹಸ್ರಾ, ದರ್ಭಂಗಾ ಜಿಲ್ಲೆಗಳಲ್ಲಿ ನಕ್ಸಲೈಟರು ಹಲವು ತರಬೇತಿ ಶಿಬಿರಗಳನ್ನು ಸ್ಥಾಪಿಸಿರುವರೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಹೇಳಿದರು – 12 ಮಂದಿಯನ್ನು ಬಂಧಿಸಲಾಗಿದೆಯೆಂದೂ ಹೇಳಿದರು.

★

ನೇರ ಕಾರ್ಯದ ಬೆದರಿಕೆ

ಹುಬ್ಬಳ್ಳಿ— ಕರ್ನಾಟಕ ಸಹಕಾರ ಹತ್ತಿ ಗಿರಣಿಯನ್ನು ಸರಕಾರ ಒಂದು ವಾರದಲ್ಲಿ ಪುನರ್ ತೆರೆಯದಿದ್ದರೆ, ತಾವು ನೇರ ಕಾರ್ಯಾಚರಣೆ ಕೈಗೊಳ್ಳುವುದಾಗಿ ಮಿಲ್ಲಿನ 2000 ಕಾರ್ಮಿಕರು ಬೆದರಿಕೆ ಹಾಕಿದಾರೆ

●

ರಷ್ಯಾದ ಅಣುವಾಸ್ತ್ರ

ಮಸ್ಕೋ— ತನ್ನ ದೇಶವು ವಿಶ್ವದ ಅತಿ ಶಕ್ತಯುತ ಅಣುವಾಸ್ತ್ರ ತಯಾರಿಸಿದೆಯೆಂದೂ, ರಷ್ಯದ ಯುದ್ಧತಂತ್ರ ಕ್ಷಿಪಣಿ ವಿಶ್ವದ ಯಾವ ಭಾಗಕ್ಕೆ ಬೇಕಾದರೂ ಅತಿ ಸರಿಯಾಗಿ ಹೊಡೆಯಬಹುದೆಂದೂ ರಷ್ಯಾ ರಾಕೆಟ್ ಸೈನ್ಯದ ಮುಖ್ಯಾಧಿಕಾರಿಯರು ಹೇಳಿದರು.

★

ಇಂದಿರಾರವರ ಏಐಸಿಸಿ

ನವದೆಹಲಿ—. ಪ್ರಧಾನಿ ಇಂದಿರಾರವರು ಕರೆದಿರುವ ಏಐಸಿಸಿ ಅಧಿವೇಶನಕ್ಕೆ ಏಐಸಿಸಿಯ ಒಟ್ಟು 686 ಸದಸ್ಯರಲ್ಲಿ 434 ಮಂದಿ ಬರುವ ಸಂಭವವಿದೆಯೆಂದು ಹೇಳಲಾಗಿದೆ – ಪ್ರತಿನಿಧಿಗಳಿಗೆ ಆಹಾರ ಸರಬರಾಜನ್ನು ಉಚಿತವಾಗಿ ಮಾಡಲು ಅನೇಕರು ಮುಂದೆ ಬಂದಿದ್ದಾರೆ – ದೋಭಿಗಳೂ, ಕ್ಷೌರಿಕರೂ ಪ್ರತಿನಿಧಿಗಳಿಗೆ ಉಚಿತ ಸೇವೆ ಸಲ್ಲಿಸುವದಾಗಿ ತಿಳಿಸಿದ್ದಾರೆ – ಪ್ರತಿನಿಧಿಗಳ ಉಪಯೋಗಕ್ಕೆ 80 ಕಾರುಗಳು ಉಚಿತವಾಗಿ ದೊರೆಯಲಿವೆ.

ಮುಷ್ಕರದ ಬೆದರಿಕೆ

ಹುಬ್ಬಳ್ಳಿ– ಮುನಿಸಿಪಲ್ ಕಾರ್ಪೊರೇಷನ್ನಿನ ಸ್ಯಾನಿಟರಿ ನೌಕರರು ತಮ್ಮ ಕೇಳಿಕೆ ನೆರವೇರಿಸಲ್ಪಡದಿದ್ದರೆ ತಾ || 28 ರಿಂದ ಮುಷ್ಕರ ಹೂಡುವುದಾಗಿ ನೋಟೀಸು ಕೊಟ್ಟಿರುವರು.

●

ಎಂಪಿಸಿಸಿ

ಬೆಂಗಳೂರು— ಎಂಪಿಸಿಸಿ ಬಿಜಾಪುರದಲ್ಲಿ ಡಿಸೆಂಬರು 13–14 ರಂದು ನಡೆಯುವದೆಂದು ಹೇಳಲಾಗಿದೆ.

★

ಲೆವಿ ಅನಶ್ಯಕತೆ

ಮೈಸೂರು – ಆಹಾರಧಾನ್ಯಗಳ ಬೆಲೆ ಹೆಚ್ಚು ಏರಿಳಿತವಾಗದಿರಲು ರೈತರ ಹಿತಕ್ಕಾಗಿ ಲೆವಿ ಪದ್ಧತಿ ಜಾರಿಯಲ್ಲಿರಬೇಕೆಂದು, ಕಲಮುಳ್ಳಿ ಗ್ರಾಮದಲ್ಲಿ ಅಕ್ಕಿ ಗಿರಣಿ ಉದ್ಘಾಟಿಸುತ್ತಾ ಆಹಾರ ಮಂತ್ರಿ ವಿಠಲ ದಾಸ್ ಶೆಟ್ಟರು ಹೇಳಿದರು.

○

ಚೀಣಾ ಪಾಕಿಸ್ಥಾನಗಳ ದುಷ್ಕಾರ್ಯ

ವಿಶ್ವಸಂಸ್ಥೆ— ಕಾಶ್ಮೀರ ಪುತ್ತು ಜಮ್ಮು ಭಾಗಗಳನ್ನು ಪಾಕಿಸ್ತಾನ ಮತ್ತು ಚೀಣ ನ್ಯಾಯಬಾಹಿರವಾಗಿ ಆಕ್ರಮಿಸಿರುವ ವಿಷಯವನ್ನು ವಿಶ್ವಸಂಸ್ಥೆಯ ಗಮನಕ್ಕೆ ಭಾರತ ತಂದಿತು.

★

ನವೀನ ಗಡಿಯಾರ

ನವದೆಹಲಿ— ಪೂರ್ವ ಬರ್ಲಿನ್ನಿನಲ್ಲಿ ವಿಶ್ವದ ರಾಜಧಾನಿಗಳ ಬೇರೆಬೇರೆ ಕಾಲಗಳನ್ನು ತೋರಿಸುವ ಎಲೆಕ್ಟ್ರಾನಿಕ್ ಗಡಿಯಾರವನ್ನು ಸ್ಥಾಪಿಸಲಾಗಿದೆ.

★

ಮಹಿಳಾ ವಿಮಾನಚಾಲಕರು

ಚೀಣಾದ ಹುಡುಗಿಯರು ವಿಮಾನ ಪಡೆಗಳಲ್ಲಿ ಪುರುಷರಷ್ಟೇ ನಿಪುಣ ವಿಮಾನ ಚಾಲಕರಾಗಿರುವರೆಂದು ಹೇಳಲಾಗಿದೆ.

●

ಉನ್ನತ ಮಟ್ಟದ ತನಿಖೆ

ಬೆಂಗಳೂರು— ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ರೂ. 2 ಲಕ್ಷಕ್ಕೆ ಕಾರಣವಾದ ಅಗ್ನಿ ಅನಾಹುತಕ್ಕೆ ಕಾರಣದ ಬಗ್ಗೆ ಉನ್ನತಮಟ್ಟದ ತನಿಖೆಗೆ ಆಜ್ಞೆ ಮಾಡಲಾಗಿದೆ.

★

ಓವರ್ ಡ್ರಾಫ್ಟ್

ನವದೆಹಲಿ— ರಿಜರ್ವ್ ಬ್ಯಾಂಕಿನಲ್ಲಿ ಆಂಧ್ರಪ್ರದೇಶ ರೂ. 745 ಲಕ್ಷ, ರಾಜಸ್ಥಾನ ರೂ. 4396 ಲಕ್ಷ, ತಮಿಳುನಾಡು ರೂ. 1528 ಲಕ್ಷ. ಓವರ್ ಡ್ರಾ ಫ್ಟ್ ಹೊಂದಿವೆ.

○

ಪ್ರತಿಬಂಧಕವಿಲ್ಲ

ನವದೆಹಲಿ— ಇಂದು ನಡೆಸಲು ಏರ್ಪಡಿಸಿರುವ ಏಐಸಿಸಿ ಅಧಿವೇಶನಕ್ಕೆ ದೆಲ್ಲಿ ಹೈ ಕೋರ್ಟಿನ ತಡೆಆಜ್ಞೆ ದೊರೆಯಲಿಲ್ಲ; ವಿಚಾರಣೆ ಸೋಮವಾರಕ್ಕೆ ಮುಂದುವರಿಸಲಾಗಿದೆ.

○

ಹೊಸ ಕಾಂಗ್ರೆಸ್ ಅಧ್ಯಕ್ಷರಿಗಾಗಿ

ನವದೆಹಲಿ— ಇಂದು, ನಾಳೆ ನಡೆಸಲಾಗುವ ಏಐಸಿಸಿ ಅಧಿವೇಶನದಲ್ಲಿ ಹೊಸ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಕೇಳಿಕೆ ಮಾತ್ರವಲ್ಲದೆ, ಶ್ರೀ ನಿಜಲಿಂಗಪ್ಪನವರು ಪಾರ್ಟಿ ಸದಸ್ಯರ ಮೇಲೆ ತೆಗೆದುಕೊಂಡಿರುವ ವಿರುದ್ಧ ಕಾರ್ಯಗಳು ಮತ್ತು ಪಾರ್ಲಿಮೆಂಟನಲ್ಲಿ ವಿರೋಧ ಕಾಂಗ್ರೆಸ್ ಪಕ್ಷ ಸ್ಥಾಪಿಸಿರುವುದೂ ಚರ್ಚಿಸಲಾಗುವುದು.

○

ಚಲಚಿತ್ರಗಳಲ್ಲಿ ಚುಂಬನ

ನವದೆಹಲಿ— ಆಲ್ ಇಂಡಿಯಾ ರೇಡಿಯೋ ನಡೆಸಿದ ಮಾದರಿ ಸರ್ವೆಯಲ್ಲಿ ಶೇಕಡಾ 72 ಮಂದಿ ಚಲಚ್ಚಿತ್ರಗಳಲ್ಲಿ ಚುಂಬನವನ್ನು ವಿರೋಧಿಸಿರುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಸರ್ಕಸ್ ರಾಷ್ಟ್ರೀಕರಣವಿಲ್ಲ

ನವನದೆಹಲಿ— ದೇಶದ ಸರ್ಕಸ್ಸನ್ನು ರಾಷ್ಟ್ರೀಕರಣ ಮಾಡಲು ಸರಕಾರ ಯೋಜಿಸಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ವಿಮಾನ ಅಪಘಾತ

ಲಾಗೋಸ್— ಲಂಡನ್ನಿನಿಂದ ಹಾರಿಬಂದ ನೈಜೀರಿಯಾ ವಿಮಾನ ಸಿಡಿದು ಅದರಲ್ಲಿದ್ದ 85 ಮಂದಿ ಮಡಿದರು.

○

ಗುರು ನಾನಕ್

ಗುರು ನಾನಕರು ಹುಟ್ಟಿದಾಗ ಜೋತಿಷ್ಯನೊಬ್ಬ ನುಡಿದಿದ್ದನಂತೆ– ' ಇವನೊಬ್ಬ ಮಹಾ ವಿಭೂತಿಯಾಗುವರು ; ಹಿಂದೂಗಳೂ ಮುಸಲ್ಮಾನರೂ ಕೂಡಿಯೇ ಇವನನ್ನು ಪೂಜಿಸುವರು .... ಹೀಗೆ ನಡೆಯುವುದನ್ನು ನೋಡಲು ನಾನು ಜೀವಿಸಿರುವುದಿಲ್ಲವಲ್ಲಾ ಎಂಬ ವ್ಯಥೆ ನನಗೆ " ಎಂದು.

ಒಮ್ಮೆ ಗುರು ನಾನಕ್ ಒಂದು ಹಳ್ಳಿಗೆ ಹೋಗಿದ್ದಾಗ ಕುಷ್ಠ ರೋಗಿಯ ವ್ಯಕ್ತಿಯಲ್ಲಿ ಇಳಿದರು : ಆ ಕುಷ್ಠ ರೋಗಿಷ್ಟುನ್ನು ಯಾರೂ ಮುಟ್ಟುತ್ತಿರಲಿಲ್ಲ ; ಗುರು ನಾನಕರ ಅನುಗ್ರಹದಿಂದ ಆವನ ರೋಗ ವಾಸಿಯಾಯಿತು.

ಗುರು ನಾನಕರು ಬಾಬರಿನ ಸೈನ್ಯವು ತಂಗಿದ್ದ ಸ್ಥಳಕ್ಕೆ ಭೇಟಿ ಇತ್ತು ದೇವರ ನಾಮ ಹಾಡಿದರು ; ನಾನಕರಿಂದ ಪ್ರಭಾವಿತನಾದ ಬಾಬರನು ತಾನು ಸೆರೆ ಹಿಡಿದು ತಂದಿದ್ದ ಖೈದಿಗಳನ್ನೆಲ್ಲಾ ಬಿಟ್ಟುಬಿಟ್ಟನು.

ಸತ್ಯವು ಎಲ್ಲಾ ವಸ್ತುಗಳಿಗಿಂತ ಶ್ರೇಷ್ಠವಾದುದು : ಸತ್ಯಮಯವಾದ ಬದುಕು ಇನ್ನೂ ಶ್ರೇಷ್ಠವಾದುದು ಎಂದು ಗುರು ನಾನಕರು ಹೇಳಿದ್ದಾರೆ – ಸತ್ಯ ಶೋಧನೆಯೇ ಜೀವನದ ಅತಿಮ ಗುರಿಯಾಗಿರಬೇಕೆಂದು ಹೇಳಿದ್ದಾರೆ – ಸತ್ಯ ಮಾರ್ಗದಲ್ಲಿ ನಡೆಯುವುದರಿಂದ ಮಾತ್ರ ಮಾನವ ಜೀವಿಗಳಿಗೆ ಮೋಕ್ಷ ಸಾಧ್ಯವೆಂದು ಅವರು ದೃಢವಾಗಿ ನಂಬಿದ್ದರು – ಎಲ್ಲಾ ಲೋಕಗಳಿಗೂ ಒಬ್ಬನೇ ದೇವರು : ಅವನೇ ಸತ್ಯ, ಸೃಷ್ಟಿಕರ್ತ, ನಿರ್ಭಯ, ಮಾತ್ಸರ್ಯದೂರ, ಚಿರಂಜೀವಿ, ಅಭವ, ಸ್ವಯಂಭೂ : ಭಕ್ತಿಯಿಂದ ಮಾತ್ರ ಪಾರಾಸ್ತನಾಗಬಲ್ಲ ಎಂದು ಹೇಳಿದ್ದಾರೆ.

ವುಡ್‌ಲ್ಯಾಂಡ್

ಜಯಪ್ರದ 2ನೇ ವಾರ

ಶಿ ನ ಅತೀವ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹ ಮ್ ನಾ ಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸಂಗೀತ : ಓ. ಪಿ. ನಯ್ಯಾರ್

[ದಿನ 3 ಪ್ರದರ್ಶನಗಳು]

ಅಪೆದಾ— 21-11-69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ದೈವಮಗನ್

ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ

ದಿನ 3 ಆಟಗಳು

SHAKTI SUDHA

A Superb Tonic

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protectthe Cow

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತೆಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ.
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಶೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajanagar, Mysore